ANNEXURE

STATEMENT SHOWING THE TALUKWISE PARTICULARS OF PENALTY REALISED IN SHIMOGA DISTRICT FOR THE YEARS 1995-96 & 1996-97

Sl. No.	Taluk	Penalty (Rs.) 1995-96	1996-97 (Upto Jan 1997).
1.	Thirthahalli	49,788	21,400
2.	Shimoga	286,675	26,300
3.	Honnali	4,200	2,500
4.	Sagara	12,525	6,900
5.	Hosanagar	9,330	4,938
6.	Soraba	3,900	1,000
7.	Shikaripur	1,000	1,300
8.	Chennagiri	2,900	3,775
9.	Bhadravathi	3,950	2,550
Total		1,14,268	70,663

ಶಿವಮೊಗ್ಗದ ದೇವಿ ಸಕ್ಕರೆ ಕಾರ್ಖಾನೆ ಮುಚ್ಚಿರುವುದು

410(764) ಶ್ರೀ ಆಯನೂರು ಮಂಜುನಾಥ (ಹೊಸನಗರ):– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದ ದೇವಿ ಸಕ್ಕರೆ ಕಾರ್ಖಾನೆ ಮುಚ್ಚಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಈ ಕಾರ್ಖಾನೆ ಕಬ್ಬು ಬೆಳೆಗಾರರಿಗೆ ಹಾಗೂ ಸಿಬ್ಬಂದಿಗೆ ನೀಡಬೇಕಾದ ಬಾಕಿ ಮೊತ್ತವೆಷ್ಟು; ಕಬ್ಬು ಬೆಳೆಗಾರರಿಗೆ ಹಾಗೂ ಈ ಕಾರ್ಖಾನೆಯ ಸಿಬ್ಬಂದಿಗೆ ನೀಡಬೇಕಾದ ಸಂಬಳ ನೀಡದೆ ಕಬ್ಬು ಬೆಳೆಗಾರರು ಹಾಗೂ ಸಿಬ್ಬಂದಿ ಸಂಕಷ್ಟಕ್ಕೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಈ ಕಾರ್ಖಾನೆಯನ್ನು ಸರ್ಕಾರವೇ ವಹಿಸಿಕೊಂಡು ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲವೆ?

ಶ್ರೀ ಉಮೇಶ್ ಎ. ಕತ್ತಿ (ಸಕ್ಕರೆ ಸಚಿವರು)

ಅ) ಬಂದಿದೆ.

ಆ) ಕಬ್ಬು ಸರಬರಾಜು ಮಾಡಿದ ರೈತರಿಗೆ ಹಾಗೂ ಕಾರ್ಖಾನೆಯ ಕಾರ್ಮಿಕರಿಗೆ ಕ್ರಮವಾಗಿ ಸುಮಾರು ರೂ. 100.00 ಲಕ್ಷ ಮತ್ತು ರೂ. 500.00 ಲಕ್ಷ ಬಾಕಿ ಪಾವತಿಸಬೇಕಾಗಿರುತ್ತದೆ. ಬಂದಿದೆ.

ಇ) ಕಾರ್ಖಾನೆಯನ್ನು ವಹಿಸಿಕೊಂಡು ಸಮಸ್ಯೆ ಬಗ್ಗೆ ಹರಿಸುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿರುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಬಂದಿರುವ ಗಣಿ ಕೈಗಾರಿಕೆಗಳಿಗೆ ಅರ್ಜಿ

411 (393) ಶ್ರೀ ಅಯನೂರು ಮಂಜುನಾಥ (ಹೊಸನಗರ):- ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ದೇಶವಿದೇಶದ ಕಂಪನಿಗಳು ಗಣಿ ಕೈಗಾರಿಕೆಗೆ ಅರ್ಜಿ ಸಲ್ಲಿಸಿರುವುದು ನಿಜವೇ; (ಅರ್ಜಿದಾರರ ವಿವರ, ಉದ್ದೇಶ, ಸ್ಥಳ, ಕೋರಿರುವ ಭೂಮಿಯ ವಿಸ್ತೀರ್ಣ, ಇತ್ಯಾದಿ ಪೂರ್ಣ ವಿವರವಾದ ಮಾಹಿತಿ ನೀಡುವುದು).

ಆ) ಗಣಿ ಕೈಗಾರಿಕೆಯನ್ನು ವಿರೋಧಿಸಿ ಜನತೆ ನಡೆಸುತ್ತಿರುವ ಹೋರಾಟ ಸರ್ಕಾರದವರ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರವು ತೆಗೆದುಕೊಂಡ ನಿಲುವೇನು; ಹಾಗೂ ಕೈಗೊಂಡ ಕ್ರಮಗಳೇನು;

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು).

ಅ) ಹೌದು. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು. ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ಸರ್ಕಾರ ಸೂಕ್ತ ಕ್ರಮವನ್ನು ಕೈಗೊಳ್ಳುತ್ತದೆ.